2. ಉಪ್ಪಿನಂಗಡಿ (ರಾಷ್ಟ್ರೀಯ ಹೆದ್ದಾರಿ ೪೮ ಕಿ.ಮೀ. ೨೯೮.೦೦ರಿಂದ) ಕಡಬ ಸುಬ್ರಹ್ಮಣ್ಯ ರಸ್ತೆಯ ಕಿ.ಮೀ.೦.೦೦ ರಿಂದ ೩೨೫೦ರ ವರೆಗೆ (ಮರ್ದಾಲ) ವರೆಗೆ ಜಿಲ್ಲಾ ಮುಖ್ಯ ರಸ್ತೆ ಹಾಗೂ ಮರ್ದಾಲದಿಂದ ಸುಬ್ರಹ್ಮಣ್ಯ ವರೆಗೆ ಕಿ.ಮೀ. ೦.೦೦ದಿಂದ ೧೭.೬೦ರ ವರೆಗೆ ರಾಜ್ಯ ಹೆದ್ದಾರಿಯಾಗಿದ್ದು ಇದರ ಒಟ್ಟು ಉದ್ದವು ೫೦.೧೦ ಕಿ.ಮೀ. ಆಗಿರುತ್ತದೆ. ಸುಬ್ರಹ್ಮಣ್ಯದಿಂದ (೦.೦೦ಕಿ.ಮೀ.) ೩.೫೦ ಕಿ.ಮೀ. ವರೆಗೆ ೨೦೦೦ ೨೦೦೧ನೇ ಸಾಲಿನಲ್ಲಿ ಮರು ಡಾಂಬರೀಕರಣ ಮಾಡಿದ್ದು, ಉಳಿದ ಭಾಗಕ್ಕೆ ಬಹಳ ವರ್ಷಗಳ ಹಿಂದೆ ಡಾಂಬರೀಕರಣ ಮಾಡಲಾಗಿರುತ್ತದೆ. ಈ ರಸ್ತೆಯ ಸುಬ್ರಹ್ಮಣ್ಯದಿಂದ ಮರ್ದಾಲ ವರೆಗೆ ಆಯ್ದ ಭಾಗಗಳಲ್ಲಿ ರಾಜ್ಯ ಹೆದ್ದಾರಿಯ ವಾರ್ಷಿಕ ನಿರ್ವಹಣೆ ಕಾರ್ಯಕ್ರಮದಡಿಯಲ್ಲಿ ೯.೧೦ ಕಿ.ಮೀ.ಗೆ ಮರು ಡಾಂಬರೀಕರಣಕ್ಕಾಗಿ ಅವಕಾಶ ಮಾಡಲಾಗಿದೆ.

ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ರಸ್ತೆ ಕಾಮಗಾರಿಗಳು.

2183(3237) ಶ್ರೀ ಅಂಗಾರ ಎಸ್. (ಸುಳ್ಯ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ದೊಡ್ಡತೋಟ, ಕಕ್ಕುಜಡ್ಕ, ಪಾಜಪಳ್ಳ ರಸ್ತೆಯು ನಬಾರ್ಡ್ ಯೋಜನೆಯಡಿಯಲ್ಲಿ ಸೇರ್ಪಡೆಗೊಂಡಿದ್ದು ಕಾಮಗಾರಿಯನ್ನು ಪ್ರಾರಂಭಿಸದೇ ಇರಲು ಕಾರಣವೇನು?

2. ಈ ರಸ್ತೆಯ ಅಭಿವೃದ್ಧಿಯನ್ನು ಯಾವಾಗ ಪ್ರಾರಂಭಿಸಲಾಗುವುದು.

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :—

1. ಹಿಂದಿನ ಅಧಿವೇಶನದಲ್ಲಿ ಪ್ರಶ್ನೆ ಸಂಖ್ಯೆ 1458ಕ್ಕೆ ಉತ್ತರಿಸಿರುವಂತೆ ಈ ಕಾಮಗಾರಿಯ ನಬಾರ್ಡ್ ಆರ್‌ಐಡಿಎಫ್- 4ರಲ್ಲಿ ರೂ. 36.50 ಲಕ್ಷಕ್ಕೆ ಮಂಜೂರಾಗಿದ್ದು 4 ಬಾರಿ ಟೆಂಡರ್ ಕರೆದಿದ್ದು ಟೆಂಡರ್‌ನ ಮೊತ್ತವು ಅತ್ಯಧಿಕವಿದ್ದು ಈ ಹೆಚ್ಚುವರಿ ಮೊತ್ತವನ್ನು ರಾಜ್ಯ ಸರ್ಕಾರವೇ ಭರಿಸಬೇಕಿರುವುದರಿಂದ ಕಾಮಗಾರಿಯನ್ನು ಕೈಬಿಡಲಾಗಿದೆ.

2. ಈ ಕಾಮಗಾರಿಯ ಪರಿಷ್ಕೃತ ಮೊತ್ತಕ್ಕೆ ಹೊಸದಾಗಿ ಸಚಿವ ಸಂಪುಟ ಉಪಸಮಿತಿಯಲ್ಲಿ ಪ್ರಸ್ತಾವಿಸಿ ಮುಂದಿನ ಆರ್‌ಐಡಿಎಫ್ ಯೋಜನೆಯಡಿ ನಬಾರ್ಡ್‌ನಿಂದ ಅನುಮೋದನೆ ಪಡೆದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಸೇತುವೆ ಕಾಮಗಾರಿ.

2184(2706) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ ಎಷ್ಟು ಹೊಳೆಗೆ ಸೇತುವೆ ನಿರ್ಮಿಸಲಾಗುತ್ತಿದೆ. ಅವು ಯಾವುವು ಹಾಗೂ ಇವುಗಳಿಗೆ ತಗಲುವ ವೆಚ್ಚವೆಷ್ಟು; (ವಿವರ ನೀಡುವುದು)

ಅ) ಕೊಡಗು ಜಿಲ್ಲೆಯಲ್ಲಿ ನಿರ್ಮಾಣವಾಗುತ್ತಿರುವ ಮಾದಾಪುರ, ಹಟ್ಟಿಹೊಳೆ, ಕುಶಾಲನಗರ ಇಲ್ಲಿ ನಿರ್ಮಿಸುತ್ತಿರುವ ಸೇತುವೆ ಕಾಮಗಾರಿಯನ್ನು ಯಾರಿಗೆ ಎಷ್ಟು ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ ಕಾಮಗಾರಿಯು ಯಾವಾಗ ಪೂರ್ಣಗೊಳ್ಳುತ್ತದೆ (ವಿವರ ನೀಡುವುದು)

ಇ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕು ಕೊಡ್ಲಿಪೇಟೆ ಹೋಬಳಿ ಜನಾರ್ಧನ ಹಳ್ಳಿ ಸೇತುವೆ ಕಾಮಗಾರಿ ಅರ್ಧದಲ್ಲಿ ನಿಂತು ಹೋಗಲು ಕಾರಣವೇನು ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿವರು) :—

ಅ) ಕೊಡಗು ಜಿಲ್ಲೆ ಸೋಮವಾರಪೇಟೆ ತಾಲ್ಲೂಕಿನಲ್ಲಿ 4 ಹೊಳೆಗೆ ಸೇತುವೆ ನಿರ್ಮಿಸಲಾಗುತ್ತಿದೆ.

	ನಬಾರ್ಡ್ ಯೋಜನೆಯಡಿಯಲ್ಲಿ	ಅಂದಾಜು ವೆಚ್ಚ ರೂ.
೧)	ಸಕಲೇಶಪುರ-ಸೋಮವಾರಪೇಟೆ-ಮಡಿಕೇರಿ ವಿರಾಜಪೇಟೆ ರಸ್ತೆಯ ೭೯.೦೦ ಕಿ.ಮೀನಲ್ಲಿ ಗುಡುಗಳಲೆ ಹೊಳೆಗೆ ಸೇತುವೆ ನಿರ್ಮಾಣ (ಆರ್.ಐ.ಡಿಎಫ್-೬ರ ಅಡಿಯಲ್ಲಿ)	೨೦.೦೦
	ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಡಿಯಲ್ಲಿ	
೨)	ಸಕಲೇಶಪುರ, ಸೋಮವಾರಪೇಟೆ, ಮಡಿಕೇರಿ, ವಿರಾಜಪೇಟೆ ರಸ್ತೆ ೭೯.೧ ಕಿ.ಮೀ.ನಲ್ಲಿ ಮಾದಾಪುರ ಹೊಳೆಗೆ ಸೇತುವೆ ನಿರ್ಮಾಣ	೧೭೧.೦೦
೩)	ಸಕಲೇಶಪುರ, ಸೋಮವಾರಪೇಟೆ, ಮಡಿಕೇರಿ ವಿರಾಜಪೇಟೆ ರಸ್ತೆ ೮೩.೬೦ ಕಿ.ಮೀ.ನಲ್ಲಿ ಹಟ್ಟಿಹೊಳೆಗೆ ಸೇತುವೆ ನಿರ್ಮಾಣ	೨೦೦.೦೦ ೨೦೦.೦೦
೪)	ಕುಶಾಲನಗರ ಹತ್ತಿರ ಹಾವೇರಿ ನದಿಗೆ ಸೋಮವಾರಪೇಟೆ ಮತ್ತು ಕೆ.ಆರ್.ಪೇಟೆ ತಾಲ್ಲೂಕು ಗಡಿಯಲ್ಲಿ ಸೇತುವೆ ನಿರ್ಮಾಣ	೪೦೦.೦೦

ಆ) ಮಾದಾಪುರ, ಹಟ್ಟಿಹೊಳೆ ಮತ್ತು ಕುಶಾಲನಗರದಲ್ಲಿ ನಿರ್ಮಾಣವಾಗುತ್ತಿರುವ ಸೇತುವೆಗಳ ಕಾರ್ಯವನ್ನು ಮೆ: ಎಲ್ ಅಂಡ್ ಟಿ ಸಂಸ್ಥೆಗೆ ವಹಿಸಿದ್ದು, ವಿವರಗಳು ಕೆಳಗಿನಂತಿವೆ.

ಸೇತುವೆ	ಗುತ್ತಿಗೆ ಮೊತ್ತ.
೧. ಮಾದಾಪುರ	ರೂ. ೧೭೦.೦೦ ಲಕ್ಷಗಳು
೨. ಹಟ್ಟಿಹೊಳೆ	ರೂ. ೨೦೦.೦೦
೩. ಕುಶಾಲನಗರ	ರೂ. ೪೦೦.೦೦

ಈ ಸೇತುವೆ ಕಾರ್ಯಗಳು ಪ್ರಗತಿಯಲ್ಲಿ ಇದ್ದು, ಡಿಸೆಂಬರ್ 2001 ರಲ್ಲಿ ಪೂರ್ಣಗೊಳ್ಳುತ್ತವೆ.

ಇ) ಜಲಾಶಯಕ್ಕೆ ಒಳಹರಿವು ಹೆಚ್ಚಾಗಿ ಕಾಮಗಾರಿಯ ಸ್ಥಳದಲ್ಲಿ ಹಿನ್ನೀರು ನಿಂತಿರುವ ಕಾರಣ ಜೂನ್ 2001 ದಿಂದ ಕಾಮಗಾರಿಯನ್ನು ಮುಂದುವರಿಸಲಾಗುತ್ತಿಲ್ಲ, ಕಾಮಗಾರಿಯನ್ನು ಮಾರ್ಚ್ 2003 ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಕೊಡಗು ಜಿಲ್ಲೆಯಲ್ಲಿನ ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಿರುವ ಕಾರ್ಮಿಕ ಮಾಧ್ಯಮಗಳು.

2185(2707) ಶ್ರೀ ಅಪ್ಪಚ್ಚು ರಂಜನ್ ಎಂ. (ಸೋಮವಾರಪೇಟೆ) :— ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ನ್ಯಾಯಾಲಯಗಳಿವೆ?

ಆ) ರಾಜ್ಯದಲ್ಲಿ ಎಷ್ಟು ಕಾರ್ಮಿಕ ಮೊಕದ್ದಮೆಗಳು ದಾಖಲಾಗಿವೆ, ಎಷ್ಟು ಇತ್ಯರ್ಥವಾಗಿವೆ?

ಇ) ಕೊಡಗು ಜಿಲ್ಲೆಯಲ್ಲಿ ಎಷ್ಟು ದಾಖಲಾಗಿವೆ ಹಾಗೂ ಎಷ್ಟು ಇತ್ಯರ್ಥವಾಗಿವೆ? (ತಾಲ್ಲೂಕುವಾರು)

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :—

ಅ) 16.

ಆ) 1998,99 ಮತ್ತು 2000ರ ಅವಧಿಯಲ್ಲಿ ಮೊಕದ್ದಮೆ ಹೂಡಿರುವ ಹಾಗೂ ಇತ್ಯರ್ಥಗೊಂಡಿರುವ ಪ್ರಕರಣಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಇ) ಮಡಿಕೇರಿ ಕಾರ್ಮಿಕರ ನ್ಯಾಯಾಲಯದಲ್ಲಿ ದಿನಾಂಕ: 31-12-2000ದಲ್ಲಿ 27 ಪ್ರಕರಣಗಳು ದಾಖಲಾಗಿದ್ದು ಹಾಗೂ ದಿನಾಂಕ: 01-01-2001 ರಿಂದ 30-01-2001ಕ್ಕೆ 18 ಪ್ರಕರಣಗಳು ದಾಖಲಾಗಿದೆ. ಒಟ್ಟು 45 ಪ್ರಕರಣಗಳಲ್ಲಿ, 9 ಪ್ರಕರಣಗಳು ಇತ್ಯರ್ಥವಾಗಿದ್ದು, 36 ಪ್ರಕರಣಗಳು ಬಾಕಿ ಇವೆ.